## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.542/2023

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಗಣೇಶ | ಸಿಡಬ್ಲ್ಯೂ-7 |
| ತಂದೆಯ ಹೆಸರು | - | ಶಿವಣ್ಣ | ಪಿಡಬ್ಲ್ಯೂ-4 |
| ವಯಸ್ಸು | - | 40 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ | - | ಭರಮಗಿರಿ ಗ್ರಾಮ | |

**ದಿನಾಂಕಃ 08.06.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.6 ನನಗೆ ಗೊತ್ತು . ಚಾಸಾ.10 ರವರು ನನಗೆ ಗೊತ್ತಿಲ್ಲ. ಆರೋಪಿ ಗೊತ್ತಿಲ್ಲ. ಸಾಕ್ಷಿ ನಿಪಿ-6, 7 ರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಸಾಕ್ಷಿ ಸಹಿಗಳನ್ನು ನಿಪಿ-6(ಬಿ), 7-(ಬಿ) ಎಂದು ಗುರುತಿಸಲಾಯಿತು. ನಿಪಿ-6 ಮತ್ತು 7 ಕ್ಕೆ ಗ್ರಾಮಾಂತರ ಠಾಣೆಯಲ್ಲಿ 3 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಾನು ಠಾಣೆಗೆ ಹೋದಾಗ ಮಾರಿಕಣಿವೆಗೆ ಕರೆದುಕೊಂಡು ಹೋಗಿ ಅಲ್ಲಿ ಮಹಜರ್ ಗೆ ಎಂದು ಹೇಳಿ ಸಹಿ ಮಾಡಿಸಿಕೊಂಡಿದ್ದಾರೆ. ನಿಪಿ-8 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪೋಟೋ ಯಾವ ವಿಚಾರಕ್ಕೆ ತೆಗೆದಿದ್ದಾರೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವ ಕ್ರಮ ಜರುಗಿಸಿಲ್ಲ , ಏನನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನನ್ನ ಹೊರತು ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

10.02.2023 ರಂದು ಸುಮಾರು 8 ರಿಂದ 8.40 ರ ಸಮಯದಲ್ಲಿ ನನ್ನ ಹಾಗೂ

ಚಾಸಾ.6, 10 ರವರ ಸಮಕ್ಷಮ ಪೊಲೀಸರು ನಿಪಿ-6 ರಂತೆ ಪಂಚನಾಮೆ ಮಾಡಿ ಕೆಎ 17 ಎಸ್ 9989 ಮತ್ತು ಕೆಎ 16 ಇಪಿ 4245 ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ನ್ನು ಅಪಘಾತದ ಸಂಬಂಧ ತೆಗೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ ಆರ್ ಆರ್ ವಕೀಲರಿಂದ-ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು